ASHOK LEYLAND
LIGHT VEHICLES
ಅಕ್ಷರಾ ಮೋಟಾರ್ಸ್ - ಕಾವೇರಿ ಮೋಟರ್ಸ್‌ನ ಘಟಕ
ಸಂಪರ್ಕಿಸಿ : +91 9900025519

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

ಮಾಂಸಹಾರಿ ಪ್ರಿಯರಿಗೊಂದು ಸಿಹಿ ಸುದ್ದಿ
ಮಾಂಸಾಹಾರಿ (ನಾನ್–ವೆಜ್) ಫುಲ್ ಮೀಲ್ಸ್
ಪ್ರತಿದಿನ ಮಧ್ಯಾಹ್ನ 12.30 ರಿಂದ 4.00 ರವರೆಗೆ ರೂ.125/-
ಮರಿಯಪ್ಪ ಮೆಸ್ (ಮಾಂಸಹಾರಿ)
ರಾಮಸ್ವಾಮಿ ಸರ್ಕಲ್ ಹತ್ತಿರ
ಚಾಮರಾಜ ಜೋಡಿ ರಸ್ತೆ,
ಮೈಸೂರು. 0821-4246883
ಫ್ಯಾಮಿಲಿಗೆ ಪ್ರತ್ಯೇಕ ಜಾಗವಿದೆ.

ಕೇಂದ್ರ ಸಂಪುಟದಲ್ಲಿ ಉತ್ತರ ಕರ್ನಾಟಕದ ಲಿಂಗಾಯತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡದಿರುವುದಕ್ಕೆ ಬಿಜೆಪಿ ಸಂಸದ ಸುರೇಶ್ ಅಂಗಡಿ ಅವರು ರಾಜ್ಯ ನಾಯಕರನ್ನು ದೂಷಿಸಿದ್ದು, ಪಕ್ಷದ ರಾಜ್ಯ ಉಸ್ತುವಾರಿ ಪ್ರಕಾಶ್ ಜಾವಡೇಕರ್ ಅವರಲ್ಲಿ ಈ ವಿಚಾರ ಪ್ರಸ್ತಾಪಿಸುತ್ತೇನೆ ಎಂದು ತಿಳಿಸಿದ್ದಾರೆ.

### ಕೇಂದ್ರ ಸಚಿವ ಸಂಪುಟದಲ್ಲಿ ಲಿಂಗಾಯತರಿಗೆ ಪ್ರಾತಿನಿಧ್ಯ ನೀಡಲಿ

### ಅರಮನೆ ಸೌಂದರ್ಯಕ್ಕೆ ಬ್ರೆಟ್ ಲೀ ಬೌಲ್ಡ್ !

‘ಇದೊಂದು ಬಹಳ ಒಳ್ಳೆಯ ದಿನ! ಮೈಸೂರಿನ ಅರಮನೆ ಕಂಡೆ ಹಾಗೂ ರೂಬಿ ಆನೆಯಿಂದ ಆಶೀರ್ವಾದ ಪಡೆದೆ’ ಎಂದು ಆಸ್ಟ್ರೇಲಿಯಾದ ಖ್ಯಾತ ಕ್ರಿಕೆಟಿಗ ಬ್ರೆಟ್ ಲೀ ಟ್ವೀಟಿಸಿದ್ದಾರೆ.

ಗರಿಷ್ಠ: ೨೭° । ಕನಿಷ್ಠ: ೧೭°
ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಸಂಪುಟ: ೪೬ ಸಂಚಿಕೆ: ೨೩೮, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೧೪ ೦ ಚತುರ್ದಶಿ– ಧನಿಷ್ಠಾ, ಮಂಗಳವಾರ, ಸೆ.೫, ೨೦೧೭, ದೂರವಾಣಿ: ೨೪೪೨೫೧೧, ೨೪೪೨೫೧೪, ೨೪೪೨೫೧೫, ಫ್ಯಾಕ್ಸ್: ೨೪೪೨೫೧೬, ಪುಟ: ೧೨, ರೂ. ೩

# ಜನಪ್ರತಿನಿಧಿಗಳು, ನೌಕರರ ಮಕ್ಕಳು ಸರ್ಕಾರಿ ಶಾಲೆಯಲ್ಲೇ ಓದಲಿ

## ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಹತ್ವದ ಶಿಫಾರಸು

ಬೆಂಗಳೂರು,ಸೆ.೪–ಸರ್ಕಾರಿ ಹಾಗೂ ಕನ್ನಡ ಮಾಧ್ಯಮ ಶಾಲೆಗಳ ಉಳಿವು ಬೆಳವಣಿಗೆಗಾಗಿ ರಾಜ್ಯದ ಎಲ್ಲ ಜನಪ್ರತಿನಿಧಿಗಳು ಹಾಗೂ ಸರ್ಕಾರಿ ನೌಕರರು ಕಡ್ಡಾಯವಾಗಿ ತಮ್ಮ ಮಕ್ಕಳನ್ನು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೇ ಸೇರಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಎಸ್.ಜಿ. ಸಿದ್ದರಾಮಯ್ಯ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

ಖಾಸಗಿ ಶಾಲೆಗಳು ವಸೂಲು ಮಾಡುತ್ತಿರುವ ವಂತಿಗೆಗೆ ಬ್ರೇಕ್ ಹಾಕಬೇಕು, ಸರ್ಕಾರಿ ಶಾಲೆಗಳನ್ನು ಉನ್ನತೀಕರಣಗೊಳಿಸಬೇಕು ಎಂಬುದೂ ಸೇರಿದಂತೆ ಮಹತ್ವದ ೨೧ ಶಿಫಾರಸುಗಳನ್ನು ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಎಸ್.ಜಿ. ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿ ಮಾಡಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ನೇತೃತ್ವದ ಸಮಿತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಶಿಫಾರಸು ಸಲ್ಲಿಸಿತ್ತಲ್ಲದೇ ತ್ವರಿತಗತಿಯಲ್ಲಿ ಇದನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿತು.

ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಎಸ್.ಜಿ.ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ ಹಲವು ಮಹತ್ವದ ಶಿಫಾರಸುಗಳನ್ನು ಮಾಡಿದ್ದು, ಎಲ್‌ಕೆಜಿ, ಯುಕೆಜಿಗೆ ಪರ್ಯಾಯವಾಗಿ ಕನ್ನಡ ಶಾಲೆಗಳಲ್ಲೂ ಪೂರ್ವ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಬೇಕು ಎಂದು ಹೇಳಿದೆ.

⏭ ೮

**ಶಿಫಾರಸಿನ ಮುಖ್ಯಾಂಶಗಳು...**

- ■ ಸರ್ಕಾರಿ ಶಾಲೆಗಳಲ್ಲಿ ೧ನೇ ತರಗತಿಯಿಂದಲೇ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಸಬೇಕು.
- ■ ಮುಚ್ಚಿರುವ ಸರ್ಕಾರಿ ಶಾಲ ಪುನರಾರಂಭಿಸಬೇಕು
- ■ ಅಂಗನವಾಡಿ ಕೇಂದ್ರ ಪುನಶ್ಚೇತನಗೊಳಿಸಬೇಕು.

### ಸ್ಥಳೀಯ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಲು ಅಡ್ಡಿ ಹಿನ್ನೆಲೆ

## ಸಿಎಂಗಳ ಸಭೆಗೆ ಪ್ರಧಾನಿಗೆ ಆಗ್ರಹ

ಬೆಂಗಳೂರು,ಸೆ.೪– ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಭಾಷೆಯಲ್ಲಿಯೇ ನೀಡುವ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯ ಅಡ್ಡಗಾಲು ಹಾಕಿರುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಚರ್ಚಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಶಿಫಾರಸುಗಳನ್ನು ನೀಡಲು ರಚಿಸಲಾದ ಎಸ್.ಜಿ.ಸಿದ್ದರಾಮಯ್ಯ ನೇತೃತ್ವದ ಸಮಿತಿ ಸೋಮವಾರ ಸಲ್ಲಿಸಿದ ವರದಿಯನ್ನು ಸ್ವೀಕರಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕನ್ನಡದಲ್ಲೇ ನೀಡಬೇಕು ಎಂಬ ಭಾವನೆಗೆ ನ್ಯಾಯಾಲಯದ ತೀರ್ಪು ಅಡ್ಡಿಯಾಗಿದೆ ಎಂದು ನುಡಿದರು.

ಮಕ್ಕಳು ಯಾವ ಭಾಷೆಯಲ್ಲಿ ಓದಬೇಕು ಎಂಬುದನ್ನು ನಿರ್ಧರಿಸುವುದು ಪೋಷಕರ ಹಕ್ಕು ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ.

⏭ ೮

### ‘ನೆರವು’ ನೀಡದೇ ಆರ್‌ಟಿಇ ನಡೆಸಿ

ಬೆಂಗಳೂರು ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ) ಅಡಿ ಖಾಸಗಿ ಶಾಲೆಗಳಿಗೆ ನೀಡುತ್ತಿರುವ ಹಣವನ್ನು ಸ್ಥಗಿತಗೊಳಿಸಿ ಈ ಹಣವನ್ನು ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಬಳಸಬೇಕು ಎಂದು ಎಸ್.ಜಿ.ಸಿದ್ದರಾಮಯ್ಯ ನೇತೃತ್ವದ ಸಮಿತಿ ಶಿಫಾರಸು ಮಾಡಿದೆ.

ಆರ್‌ಟಿಇಯಡಿ ಖಾಸಗಿ ಶಾಲೆಗಳಿಗೆ ಸೇರ್ಪಡೆಯಾಗುವ ಶೇ.೨೫ ಬಡ ಮಕ್ಕಳ ವ್ಯಾಸಂಗದ ವೆಚ್ಚವನ್ನು ಸರ್ಕಾರ ಭರಿಸುತ್ತಿದೆ. ಈ ವರ್ಷ ೩೯೦ ಕೋಟಿ ರೂ.ಗಳನ್ನು ಖಾಸಗಿ ಶಾಲೆಗಳಿಗೆ ನೀಡುತ್ತಿದ್ದು, ೧೦ ವರ್ಷಗಳು ಕಳೆದರೆ ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಮಾಡುವ ವೆಚ್ಚಕ್ಕಿಂತ ಹೆಚ್ಚು ಹಣವನ್ನು ಖಾಸಗಿ ಶಾಲೆಗಳಿಗೆ ನೀಡ ಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಆರ್‌ಟಿಇಅಡಿ ಶೇ.೨೫ ರಷ್ಟು ಸೀಟುಗಳನ್ನು ಉಚಿತವಾಗಿ ನೀಡುವುದು ಖಾಸಗಿ ಶಾಲೆಗಳ ಕರ್ತವ್ಯ. ತಮಿಳುನಾಡಿನಲ್ಲೂ ಈ ಪದ್ಧತಿ ಇದೆ. ಅಲ್ಲಿ ಸರ್ಕಾರ ಆರ್‌ಟಿಇ ಅಡಿ ಖಾಸಗಿ ಶಾಲೆಗಳಲ್ಲಿ ಸೀಟು ಪಡೆಯುವ ಮಕ್ಕಳ ಬಾಬ್ತಿನಲ್ಲಿ ಯಾವುದೇ ಹಣ ನೀಡುವುದಿಲ್ಲ. ಇಲ್ಲೂ ಅದೇ ಪದ್ಧತಿ ಕಾರ್ಯಗತವಾಗಬೇಕು ಎಂದಿದೆ.

# ಎಸ್‌ಪಿ ಹೆಸರಿನಲ್ಲಿ ನಕಲಿ ಖಾತೆಗಳು!

### ಎಫ್‌ಬಿ, ಟ್ವಿಟರ್, ಇನ್‌ಸ್ಟಾಗ್ರಾಮ್‌ಗಳಲ್ಲಿ ಪ್ರಚೋದನಾಕಾರಿ ಹೇಳಿಕೆ ನೀಡಿದ ಕಿಡಿಗೇಡಿಗಳು

ಮೈಸೂರು, ಸೆ.೪–ವಿಕೃತ ಮನಸ್ಥಿತಿಯ ವ್ಯಕ್ತಿಗಳು ಸಾಮಾಜಿಕ ಜಾಲತಾಣವನ್ನು ಮನಸೋ ಇಚ್ಛೆ ದುರುಪಯೋಗ ಮಾಡಿಕೊಳ್ಳುತ್ತಲೇ ಬಂದಿದ್ದಾರೆ. ಮಹಿಳೆಯರು ಮಾತ್ರವಲ್ಲ, ಪ್ರಭಾವಿ ವ್ಯಕ್ತಿಗಳು, ದೇಶ ಹಾಗೂ ರಾಷ್ಟ್ರಧ್ವಜವನ್ನೇ ಅವಮಾನಿಸಿರುವ ಘಟನೆಗಳೂ ನಮ್ಮ ಮುಂದಿವೆ.

‘ಸೈಬರ್ ಕ್ರೈಮ್’ ಎಂಬ ಈ ಅಪರಾಧಗಳನ್ನು ತಡೆಗಟ್ಟಲು, ದಮನ ಮಾಡಲು ಮುಂದಾದ, ಸಾಮಾನ್ಯರಿಗೆ ನ್ಯಾಯ ಒದಗಿಸಲು ಟೊಂಕ ಕಟ್ಟಿ ನಿಂತಿರುವ ಪೊಲೀಸರೂ ಇದಕ್ಕೆ ಬಲಿಯಾಗಿರುವುದುಂಟು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ. ಚನ್ನಣ್ಣನವರ್ ಅವರೂ ಇದರಿಂದ ಹೊರತಾಗಿಲ್ಲ. ಅವರ ಹೆಸರಿನಲ್ಲಿ ಫೇಸ್ ಬುಕ್, ಟ್ವಿಟರ್ ಹಾಗೂ ಇನ್‌ಸ್ಟಾಗ್ರಾಮ್ ಖಾತೆಗಳನ್ನು ತೆರೆದು ಪ್ರಚೋದನಾಕಾರಿ ಹೇಳಿಕೆಗಳನ್ನು ಪ್ರಕಟಿಸಿರುವುದು ಬೆಳಕಿಗೆ ಬಂದಿದೆ.

ಈ ವಿಷಯ ತಿಳಿದ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚನ್ನಣ್ಣನವರ್ ಅವರು, ‘ದಯವಿಟ್ಟು ನನ್ನ ಹೆಸರನ್ನು ಬಳಸಿ ಪ್ರಚೋದನಾಕಾರಿ ಹಾಗೂ ಉತ್ತೇಕ್ಷೆಯ ಹೇಳಿಕೆಗಳನ್ನು ಹಾಕಬೇಡಿ. ಇದು ಕ್ರಿಮಿನಲ್ ಅಪರಾಧ. ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇನೆ’ ಎಂದು ತಮ್ಮ ಫೇಸ್‌ಬುಕ್ ಗೋಡೆ ಮೇಲೆ ಬರೆದುಕೊಂಡಿದ್ದಾರೆ.

ಈ ಸಂಬಂಧ ಪತ್ರಿಕೆಯೊಂದಿಗೆ ಮಾತನಾಡಿದ ರವಿ ಡಿ.ಚನ್ನಣ್ಣನವರ್ ಅವರು, ‘ನನ್ನ ಫೋಟೋ ಹಾಗೂ ಹೆಸರನ್ನು ಬಳಸಿ ಕೊಂಡು ಸಾಮಾಜಿಕ ಜಾಲ ತಾಣಗಳ ಗ್ರೂಪ್‌ನಲ್ಲಿ ಚರ್ಚೆ ಯಾಗುತ್ತಿರುವ ವಿಚಾರ ನನ್ನ ಗಮನಕ್ಕೆ ಈಗ ಬಂದಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಇದು ಕ್ರಿಮಿನಲ್ ಅಪರಾಧವಾಗುತ್ತದೆ. ಇದರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇನೆ’ ಎಂದು ಎಚ್ಚರಿಸಿದರು.

**ಪ್ರಚೋದನಾಕಾರಿ ಹೇಳಿಕೆ ಹಾಕಬೇಡಿ:** ‘ನಾನು ಸಾಮಾನ್ಯರಲ್ಲಿ ಸಾಮಾನ್ಯ ಮನುಷ್ಯ. ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ನಿರ್ವಹಿಸುತ್ತಿದ್ದೇನೆ. ನಿಮ್ಮ ಸಲಹೆ ಮತ್ತು ಸಹಕಾರ ಯಾವಾಗಲೂ ಅಗತ್ಯವಿದೆ. ನಾನು ಸಾಮಾಜಿಕ ಜಾಲ ತಾಣದ ಖಾತೆಗಳನ್ನು ಸದ್ಬಳಕೆ ಮಾಡಲು ಮಾತ್ರ ಇಟ್ಟುಕೊಂಡಿದ್ದೇನೆ. ಹೀಗಾಗಿ ದಯವಿಟ್ಟು ನನ್ನ ಹೆಸರನ್ನು ಬಳಸಿ ಕೊಂಡು ಪ್ರಚೋದನಾಕಾರಿ ಹಾಗೂ ಉತ್ತೇಕ್ಷಿಸುವ ವಿಚಾರಗಳನ್ನು ಹಾಕಬೇಡಿ’ ಎಂದು ರವಿ ಡಿ. ಚನ್ನಣ್ಣನವರ್ ಮನವಿ ಮಾಡಿದ್ದಾರೆ.



ನನ್ನ ಹೆಸರನ್ನು ದುರ್ಬಳಕೆ ಮಾಡಬೇಡಿ: ರವಿ ಡಿ.ಚನ್ನಣ್ಣನವರ್

**೨೧ರಿಂದ ದಸರಾ ಫಿಲ್ಮ್ ಫೆಸ್ಟಿವಲ್**
⏭ ಪುಟ ೨

**ಬರಡು ಕೆರೆಯಲ್ಲೂ ನೀರುಕ್ಕಿಸಲು ಚಾಲನಾ ಶಕ್ತಿಯಾದ ಅಧಿಕಾರಿ!**
⏭ ಪುಟ ೪

**ಲಾಡ್ಜ್‌ಗಳಲ್ಲಿ ಟಿವಿ ಕದಿಯುತ್ತಿದ್ದ ಇಬ್ಬರು ಕಳ್ಳರ ಬಂಧನ**
⏭ ಪುಟ ೧೦

# ನಿಲ್ಲದ ಘೋರ ಮರಣ

## ಗೋರಖಪುರದಲ್ಲಿ ಮತ್ತೆ ೯ ಶಿಶುಗಳ ಸಾವು

ಗೋರಖಪುರ್, ಸೆ.೪–ಉತ್ತರಪ್ರದೇಶದ ಸರ್ಕಾರಿ ಒಡೆತನದ ಬಿಆರ್‌ಡಿ ಆಸ್ಪತ್ರೆ ಶಿಶುಗಳಿಗೆ ಮೃತ್ಯುತಾಣವಾದಂತಿದೆ. ೨೪ ತಾಸುಗಳಲ್ಲಿ ಮತ್ತೆ ೯ ಮಕ್ಕಳು ಮೃತಪಟ್ಟಿದ್ದು, ಸಾವಿನ ಸಂಖ್ಯೆ ೩೧೩ಕ್ಕೇರಿದೆ.

ಶಿಶುಗಳ ಮರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಕೆಲವರನ್ನು ಬಂಧಿಸಿ ತನಿಖೆ ನಡೆಸುತ್ತಿದ್ದರೂ, ಸಾವಿನ ಸರಣಿ ಮುಂದುವರಿದಿದೆ. ಮಕ್ಕಳ ಜೀವ ರಕ್ಷಣೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಕಟ್ಟಪ್ಪಣೆ ಮಾಡಿದ್ದರೂ ಮತ್ತೆ ೯ ಮಕ್ಕಳು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿವೆ. ಕಳೆದ ತಿಂಗಳಿನಿಂದ ಬಿಆರ್‌ಡಿ ಆಸ್ಪತ್ರೆಯಲ್ಲಿ ಮಕ್ಕಳ ಸಾವು ದಿನನಿತ್ಯದ ಸುದ್ದಿಗಳಾಗುತ್ತಿವೆ.

**ಕಾಂಗ್ರೆಸ್ ಕಟು ಟೀಕೆ:** ಉತ್ತರಪ್ರದೇಶ ರಾಜ್ಯವನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ರೋಗಿ ರಾಜ್ಯವಾಗಿ ಮಾರ್ಪಡಿಸಿದ್ದಾರೆಂದು ಕಾಂಗ್ರೆಸ್ ಪಕ್ಷ ಸೋಮವಾರ ಕಟುವಾಗಿ ಟೀಕಿಸಿದೆ.

ಗೋರಖಪುರ ಆಸ್ಪತ್ರೆ ದುರಂತ ಪ್ರಕರಣ ಹಸಿರುವಾಗಲೇ ಅಂತಹುದೇ ಮತ್ತೊಂದು ಘಟನೆ ಫರೂಕಾಬಾದ್ ಆಸ್ಪತ್ರೆಯಲ್ಲಿ ಸಂಭವಿಸಿದೆ. ಆಕ್ಸಿಜನ್ ಕೊರತೆಯಿಂದಾಗಿ ಬರೋಬ್ಬರಿ ೪೯ ಮಕ್ಕಳು ಸಾವನ್ನಪ್ಪಿರುವ ಘಟನೆ ಬೆಳಕಿಗೆ ಬಂದಿದೆ.

⏭ ೮

# ಟಿಪ್ಪರ್‌ಗೆ ಮದುವೆ ದಿಬ್ಬಣದ ಬಸ್ ಡಿಕ್ಕಿ

### ಐವರಿಗೆ ಗಂಭೀರ ಗಾಯ; ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ರಿಂಗ್ ರಸ್ತೆಯಲ್ಲಿ ಘಟನೆ

ಮೈಸೂರು,ಸೆ.೪–ಮದುವೆಗೆ ಬರುತ್ತಿದ್ದವರ ಬಸ್‌ವೊಂದು ನಿಂತಿದ್ದ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಐವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ಹೊರವಲಯದ ರಿಂಗ್ ರಸ್ತೆಯಲ್ಲಿ ಸೋಮವಾರ ಸಂಜೆ ನಡೆದಿದೆ.

ಸರಸ್ವತಿಪುರಂನಲ್ಲಿರುವ ಕೃಷ್ಣಧಾಮ ಕಲ್ಯಾಣ ಮಂಟಪದಲ್ಲಿ ನಡೆದ ಮದುವೆ ಸಮಾರಂಭಕ್ಕೆಂದು ಬೆಂಗಳೂರಿನಿಂದ ಬಸ್‌ನಲ್ಲಿ ಬರುತ್ತಿದ್ದಾಗ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ರಿಂಗ್ ರಸ್ತೆಯಲ್ಲಿ ಬ್ರೇಕ್ ವಿಫಲವಾಗಿ ರಸ್ತೆ ಬದಿಯಲ್ಲಿ ನಿಂತಿದ್ದ ಟಿಪ್ಪರ್ ಲಾರಿಗೆ ಹಿಂದಿನಿಂದ ಗುದ್ದಿದೆ. ಈ ಘಟನೆಯಲ್ಲಿ ಬಸ್‌ನಲ್ಲಿದ್ದ ಸಿಂಧೂ, ಉಷಾ, ಲಕ್ಷ್ಮೀ ಸೇರಿದಂತೆ ಐವರು ಗಂಭೀರವಾಗಿ ಗಾಯಗೊಂಡಿದ್ದಾರೆ.

⏭ ೮

ಮೈಸೂರಿನಲ್ಲಿ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದ ಬಸ್ಸಿನ ಮುಂಭಾಗ ನಜ್ಜುಗುಜ್ಜಾಗಿರುವುದು.

# ನಕಲಿ ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಯತ್ನ

## ಮುಖ್ಯಮಂತ್ರಿ ಕಚೇರಿಯಿಂದ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ

**ಮಂಜು ಕೋಟೆ**

ಎಚ್.ಡಿ.ಕೋಟೆ,ಸೆ.೪– ತಾಲ್ಲೂಕಿನಲ್ಲಿ ಭೂಮಾಫಿಯಾಗೆ ಕಡಿವಾಣ ಹಾಕಲು ಜಿಲ್ಲಾಡಳಿತ ಸಜ್ಜಾಗಿದೆ; ನಕಲಿ ದಾಖಲಾತಿ ಸೃಷ್ಟಿಸಿದ ಕೆಲವರ ವಿರುದ್ಧ ತನಿಖೆ ನಡೆಸಿ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿಗಳ ಉಪಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ಪ್ರಾಮಾಣಿಕವಾಗಿ ಖರೀದಿಸಿದ ಭೂಮಿಯನ್ನು ಇನ್ಯಾರೋ ಅಕ್ರಮವಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಲಪಟಾಯಿಸುವ ಪ್ರಕರಣಗಳು ನಡೆಯುತ್ತಿವೆ. ಇಂತಹ ಪ್ರಕರಣಗಳನ್ನು ಸಾಕ್ಷೀಕರಿಸುವಂತೆ ಉದ್ಯಮಿ ಅರುಣ್ ಎಂ.ಗೌಡ ಅವರು ಖರೀದಿಸಿದ ಭೂಮಿಯನ್ನು ಕೆಲವರು ನಕಲಿ ದಾಖಲೆ ಸೃಷ್ಟಿಸಿ ವಶಪಡಿಸಿ ಕೊಳ್ಳಲು ಯತ್ನಿಸಿದ್ದಾರೆ.

⏭ ೮

### ಎಚ್.ಡಿ.ಕೋಟೆಯಲ್ಲಿ ಭೂಮಾಫಿಯಾ ಕಬಂಧಬಾಹು

ಭೂಮಾಫಿಯಾದವರು ಸೃಷ್ಟಿಸಿರುವ ನಕಲಿ ದಾಖಲೆ

ನಾವು ಸೂಕ್ತ ದಾಖಲಾತಿಗಳೊಂದಿಗೆ ಖರೀದಿಸಿದ ಭೂಮಿಯನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ ಲಪಟಾಯಿಸಲು ಯತ್ನಿಸಿದ್ದನ್ನು ಕಂಡು ಆಘಾತವಾಯಿತು. ಇಂತಹ ಕೃತ್ಯ ಎಸಗಿದವರನ್ನು ಬಿಡಬಾರದು ಎಂದು ಪ್ರಕರಣವನ್ನು ಬಯಲಿಗೆಳೆದು ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅವರು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಜಿಲ್ಲಾಧಿಕಾರಿಗಳು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು.

-ಅರುಣ್ ಎಂ.ಗೌಡ,
ಸಮಾಜ ಸೇವಕರು.

Tuesday 5 Septembar 2017
ಆಂದೋಲನ
ಸುದ್ದಿಗಾಗಿ
andolana@gmail.com

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 393
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ THOLASI JEWELS
₹2803 1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926



ಅಭಿನಂದನೆಗಳು
ನೂತನವಾಗಿ IPS ಹುದ್ದೆಗೆ ಮುಂಬಡ್ತಿ ಹೊಂದಿರುವ
ಶ್ರೀಯುತ ಎ.ಎನ್. ಪ್ರಕಾಶ್‌ಗೌಡರವರಿಗೆ
ಹೃದಯಪೂರ್ವಕ ಅಭಿನಂದನೆಗಳು
ಹಾಗೂ ಇಂದು ದಿ: 5-9-2017ರ ಮಂಗಳವಾರ ಮಧ್ಯಾಹ್ನ
3.30ಕ್ಕೆ ಸಕ್ಕರ ನಾಹಿನ ಮಂಡ್ಯದ ರೈತ ಸಭಾಂಗಣದಲ್ಲಿ
ಅಭಿನಂದನ ಕಾರ್ಯಕ್ರಮ ನಡೆಯುತ್ತಿದ್ದು
ಈ ಕಾರ್ಯಕ್ರಮವು
ಯಶಸ್ವಿ ಆಗಲಿ ಎಂದು ತುಂಬು
ಹೃದಯದಿಂದ ಹಾರೈಸುವವರು
ಶ್ರೀ. ಎ.ಎನ್. ಪ್ರಕಾಶ್‌ಗೌಡ
IPS
ಸ್ಟೀಟ್ಸ್ ಮಹೇಶ್
ವ್ಯವಸ್ಥಾಪಕ ನಿರ್ದೇಶಕರು
ಅಂಬಾರಿ ಚಿಟ್ಸ್ ಪ್ರೈ.ಲಿ., ಮೈಸೂರು